## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶೈಕ್ಷಣಿಕ/ಧರ್ಮದಾಯ ಧತ್ತಿಯ ತೇವಣಿ ಮೇಲೆ ಇರಿಸಿದ ಮೊತ್ತಕ್ಕೆ ಬಡ್ಡಿ ಹಣ ನೀಡುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 54 ಬಿಜಿಎಲ್ 90, ದಿ:19.01.1995.
2. ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 18 ಬಿಜಿಎಲ್ 2003, ದಿ:28.02.2003.

ಪ್ರಸ್ತಾವನೆ:-

ಶೈಕ್ಷಣಿಕ ಹಾಗೂ ಧಾರ್ಮಿಕ ಉದ್ದೇಶಗಳಿಗಾಗಿ ಖಜಾನೆಯಲ್ಲಿ ಇರಿಸಲಾಗುವ ಧಾರ್ಮಿಕ ದತ್ತಿನಿಧಿ ಠೇವಣಿಗಳಿಗೆ ಅರ್ಧ ವಾರ್ಷಿಕ ಬಡ್ಡಿಯನ್ನು ಶೇಕಡಾ 9 ರಿಂದ 12 ರಷ್ಟು ಹೆಚ್ಚಿಸಿ ಮೇಲೆ(1) ರಲ್ಲಿ ಓದಲಾದ ಆದೇಶವನ್ನು ಹೊರಡಿಸಲಾಗಿತ್ತು.

2. ಸರ್ಕಾರದ ವಿವಿಧ ನಿಗಮಗಳು, ಮಂಡಳಿಗಳು ಹಾಗೂ ಸ್ವಾಯತ್ತ ಸಂಸ್ಥೆಗಳು ಖಜಾನೆಯಲ್ಲಿ ಠೇವಣಿ ಇರಿಸುವ ಮೊತ್ತಗಳ ಮೇಲೆ, ಆರು ತಿಂಗಳಿನಿಂದ 1 ವರ್ಷದವರೆಗಿನ (interest bearing deposit accounts) ಠೇವಣಿಗಳಿಗೆ ಶೇ 4 ರಷ್ಟು ಹಾಗೂ 1 ವರ್ಷಕ್ಕೂ ಮೇಲ್ಪಟ್ಟ ಠೇವಣಿಗಳ ಮೇಲೆ ಶೇ. 6 ರಷ್ಟು ಬಡ್ಡಿ ದರವನ್ನು ನಿಗದಿಪಡಿಸಿ ಮೇಲೆ(2) ರಲ್ಲಿ ಓದಲಾದ ಆದೇಶವನ್ನು ಸರ್ಕಾರವು ಹೊರಡಿಸಿದೆ.

3. ಶೈಕ್ಷಣಿಕ/ಧರ್ಮದಾಯ ದತ್ತಿಗಳಿಗೆ ನೀಡುತ್ತಿರುವ ಬಡ್ಡಿಯ ದರವು ರಾಷ್ಟ್ರೀಕೃತ ಬ್ಯಾಂಕುಗಳು ಠೇವಣಿಗಳ ಮೇಲೆ ನೀಡುತ್ತಿರುವ ಬಡ್ಡಿ ದರಕ್ಕಿಂತ ಹಾಗೂ ದಿ:28.02.2003 ರ ಆದೇಶದ ಪ್ರಕಾರ ಖಜಾನೆಯಲ್ಲಿ ನಿರ್ವಹಿಸುತ್ತಿರುವ ಠೇವಣಿ ಖಾತೆಗಳ ಮೇಲೆ ನೀಡುವ ಬಡ್ಡಿ ದರಕ್ಕಿಂತ ಹೆಚ್ಚಾಗಿರುವುದನ್ನು ಗಮನಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ:ಆಇ: 02 ಟಿ.ಎಫ್.ಸಿ. 2019,**

**ಬೆಂಗಳೂರು, ದಿನಾಂಕ:24.10.2019.**

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 54 ಬಿಜಿಎಲ್ 90, ದಿ:19.01.1995 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ. ಇನ್ನು ಮುಂದೆ ಶೈಕ್ಷಣಿಕ/ಧರ್ಮದಾಯ ದತ್ತಿಗಳ ಠೇವಣಿ ಖಾತೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ 18 ಬಿಜಿಎಲ್ 2003, ದಿ:28.02.2003 ರಲ್ಲಿ ನಿಗಧಿಪಡಿಸಿರುವ ಬಡ್ಡಿಯ ದರದಲ್ಲಿ ಬಡ್ಡಿಯನ್ನು ನೀಡುವಂತೆ ಆದೇಶಿಸಲಾಗಿದೆ.

2) ಸರ್ಕಾರದ ಆದೇಶ ಸಂ:ಎಫ್.ಡಿ 18 ಬಿಜಿಎಲ್ 2003, ದಿ:28.2.2003 ರ ಆದೇಶದಲ್ಲಿನ ಬಡ್ಡಿಯ ದರವು ಮುಂದೆ ಪರಿಷ್ಕೃತವಾದಲ್ಲಿ, ಆ ಬಡ್ಡಿ ದರವು ಧಾರ್ಮಿಕ/ಶಿಕ್ಷಣ ದತ್ತಿ ಠೇವಣಿ ಗಳಿಗೂ ಅನ್ವಯವಾಗುತ್ತದೆ.

3) ಬಡ್ಡಿ ದರವನ್ನು ಪಾವತಿ ಮಾಡುವಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 262 ರಿಂದ 265 ರಲ್ಲಿ ತಿಳಿಸಿರುವ ಉಪಬಂಧಗಳು ಅನ್ವಯವಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/10/19

(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ.
(ಆರ್ಥಿಕ ನಿಯಮಗಳು, ಆಯವ್ಯಯ
ಸಂಕಲನ ಮತ್ತು ಸಮಿತಿ ಶಾಖೆ)

ಪ್ರತಿಗಳು:-

1. ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369. ಬೆಂಗಳೂರು.
2. ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಖಜಾನೆ-2) 7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆ 1ನೇ ಮುಖ್ಯ ರಸ್ತೆ ಗಾಂಧಿ ನಗರ, ಬೆಂಗಳೂರು-560 009.
6. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
7. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
8. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560 001.
9. ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ, ಮತ್ತು ಲೆಕ್ಕಪತ್ರ ಇಲಾಖೆ, 3ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, 'ಎ' ಬ್ಲಾಕ್, ಬಿ.ಎಂ.ಟಿ.ಸಿ. ಶಾಂತಿನಗರ, ಬೆಂಗಳೂರು-560 027.
10. ಎಲ್ಲಾ ಜಿಲ್ಲಾಧಿಕಾರಿಗಳು.
11. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಬೆಂಗಳೂರು.
12. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.
13. ಎಲ್ಲಾ ಜಿಲ್ಲಾ ಖಜಾನೆಗಳಾಧಿಕಾರಿಗಳು.
14. ಉಪ ನಿರ್ದೇಶಕರು, ಟಿಎಸ್‌ಎಂಸಿ ಖನಿಜ ಭವನ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.